ದಿವ್ಯತ್ರಯರು ಕಂಡ

ಶಿವ–ಶಕ್ತಿ ಭಾವ

ಹಿಂದಿನ ಸಂಚಿಕೆಯಲ್ಲಿ ತಂತ್ರಶಾಸ್ತ್ರದ ಬೆಳಕಿನಲ್ಲಿ ಶಿವ–ಶಕ್ತಿ ತತ್ತ್ವದ ಬಗ್ಗೆ ತಿಳಿದುಕೊಂಡೆವು. ಈಗ ಅದೇ ವಿಚಾರವನ್ನು ದಿವ್ಯತ್ರಯರು, ಅದರಲ್ಲೂ ಶ್ರೀರಾಮಕೃಷ್ಣರು ತಮ್ಮ ಸರಳ ಸುಂದರ ಭಾಷೆಯಲ್ಲಿ ಹೇಗೆ ವಿವರಿಸುತ್ತಾರೆ ಎನ್ನುವುದನ್ನು ಮನನ ಮಾಡೋಣ.

ಮಾಯೆ ಎನ್ನುವುದು ಈಶ್ವರನ ಶಕ್ತಿ : ತಂತ್ರಶಾಸ್ತ್ರವು ಶಕ್ತಿಯ ಸುಪ್ತಾವಸ್ಥೆ ಮತ್ತು ಕ್ರಿಯಾವಸ್ಥೆಗಳ ಬಗ್ಗೆ ಹೇಳುತ್ತದೆ. ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಶ್ರೀರಾಮಕೃಷ್ಣರು ಮಾಯೆ ಅಥವಾ ಶಕ್ತಿಯನ್ನು ಚಲಿಸುವ ಹಾವಿಗೆ ಹೋಲಿಸುತ್ತಾರೆ. ಬ್ರಹ್ಮ ಅಥವಾ ಶಿವನನ್ನು ಚಲಿಸದೆ, ಸುಮ್ಮನೆ ಬಿದ್ದುಕೊಂಡಿರುವ ಹಾವಿಗೆ ಹೋಲಿಸುತ್ತಾರೆ. ಎರಡರಲ್ಲೂ ಸ್ವರೂಪದಲ್ಲಿ ಭೇದವಿಲ್ಲ. ಆದರೆ, ಕರ್ಮದ ಮೂಲಕ ಕಾಣಿಸಿಕೊಳ್ಳುವ ಶಕ್ತಿಯೇ ಮಾಯೆ. ಸುಪ್ತವಾಗಿರುವ ಶಕ್ತಿಯ ಸ್ಥಿತಿಯೇ ಬ್ರಹ್ಮ. ಇದನ್ನು ಇನ್ನೂ ಒಂದು ಉದಾಹರಣೆಯ ಮೂಲಕ ಅರಿತುಕೊಳ್ಳಬಹುದು. ಸರೋವರದ ನೀರು ಒಮ್ಮೊಮ್ಮೆ ಶಾಂತವಾಗಿರುತ್ತದೆ. ಮರುಕ್ಷಣ ಅಲೆಯಾಗಿ ರೂಪಾಂತರ ಹೊಂದುತ್ತದೆ. ಹೀಗೆಯೇ ಬ್ರಹ್ಮ ಮತ್ತು ಮಾಯೆ ಕೂಡ. ಬ್ರಹ್ಮನದು ಶಾಂತಸ್ಥಿತಿ. ಕ್ರಿಯಾತ್ಮಕ ಸ್ಥಿತಿಯೇ ಶಕ್ತಿ ಅಥವಾ ಮಾಯೆ.

ಶಿವ–ಶಕ್ತಿಯರ ಸಂಬಂಧ : ಶಿವ–ಶಕ್ತಿಯರ ಸಂಬಂಧ ಬೆಂಕಿ ಮತ್ತು ಅದರ ದಾಹಕ ಶಕ್ತಿಯಂತೆ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಸೃಷ್ಟಿಗೆ ಎರಡು ತತ್ತ್ವಗಳೂ ಅವಶ್ಯಕ. ಅದು ಹೇಗೆ? ಕುಂಬಾರ ಮಡಕೆ ಮಾಡುತ್ತಾನೆ. ಒಣ ಮಣ್ಣಿನಿಂದ ಅವನು ಮಡಕೆ ಮಾಡಲು ಸಾಧ್ಯವಿಲ್ಲ. ಮಣ್ಣು ತೇವವಾಗಿರಬೇಕು. ಅಂದರೆ ಅದರ ಜೊತೆ ನೀರು ಸೇರಿರಬೇಕು. ಹಾಗೆಯೇ ನಿಷ್ಕ್ರಿಯವಾದ ಬ್ರಹ್ಮ ಅಥವಾ ಶಿವತತ್ತ್ವದ ಜೊತೆಗೆ ಮಾಯೆ ಅಥವಾ ಶಕ್ತಿಯ ಮಿಲನವಾಗಲೇಬೇಕು. ನೀರು ಜೊತೆಗೂಡಿದ ಮಣ್ಣಿನಿಂದ ಮಾತ್ರವೇ ಮಡಕೆಯ ಉತ್ಪತ್ತಿ ಸಾಧ್ಯ. ಅದೇರೀತಿ, ಮಾಯೆಯೊಡಗೂಡಿದ ಬ್ರಹ್ಮನಿಂದ ಮಾತ್ರವೇ ಜಗತ್ತಿನ ಸೃಷ್ಟಿ ಸಾಧ್ಯ.

ಮಾಯೆಯ ಸ್ವರೂಪ : 'ಯಾವುದು ನಿಜವಾಗಿಯೂ ಇಲ್ಲವೋ, ಯಾವುದನ್ನು ಹೀಗೇ ಎಂದು ನಿರ್ಧರಿಸಲಾಗುವುದಿಲ್ಲವೋ ಅದೇ ಮಾಯೆ' ಎಂದು ವೇದಾಂತ ಹೇಳುತ್ತದೆ. ಮಾಯೆಯ ವಿಕೃತಸ್ವಭಾವವನ್ನು ಬಿಂಬಿಸುವಂಥ ದೃಶ್ಯವೊಂದನ್ನು ಶ್ರೀರಾಮಕೃಷ್ಣರು ಒಮ್ಮೆ ಕಂಡರು. ಆ ದೃಶ್ಯ ಹೀಗಿತ್ತು: ಒಂದು ಸಣ್ಣ ಬಿಂದು ಕಾಣಿಸಿಕೊಂಡಿತು. ಅದು ಕ್ರಮೇಣ ವಿಸ್ತಾರವಾಗಿ ಬಾಲಕಿಯ ರೂಪ ಕಂಡಿತು. ಬಾಲಕಿಯೇ ಒಬ್ಬ ಹೆಂಗಸಾಗಿ ಒಂದು ಮಗುವನ್ನು ಹೆತ್ತಳು. ಮಗು ಹುಟ್ಟಿದ ತಕ್ಷಣವೇ ಅದನ್ನು ಅವಳೇ ನುಂಗಿಬಿಟ್ಟಳು. ಹೀಗೆಯೇ ಆಕೆಗೆ ಅನೇಕ ಮಕ್ಕಳು ಹುಟ್ಟಿದರು. ಅವರೆಲ್ಲರನ್ನೂ ಆಕೆಯೇ ನುಂಗಿಬಿಟ್ಟಳು. ಇದನ್ನು ನೋಡಿದ ಶ್ರೀರಾಮಕೃಷ್ಣರ ಮನಸ್ಸಿಗೆ ಭಾಸವಾಯಿತು, 'ಇವಳೇ ಮಾಯೆ' ಎಂದು.

ಹಾವಿನ ಹಲ್ಲು : ವೇದಾಂತದ ಗಹನವಾದ ವಿಚಾರವನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಹೇಳುವ ಕಲೆಯನ್ನು ಶ್ರೀರಾಮಕೃಷ್ಣರು ಸಿದ್ಧಿಸಿಕೊಂಡಿದ್ದರು. ವೇದಾಂತದ ಪ್ರಕಾರ ಬ್ರಹ್ಮವೊಂದೇ ನೈಜ ಸತ್ಯ. ಮಾಯೆಯ ಪ್ರಭಾವದಿಂದ ಮನುಷ್ಯ ವಿವಿಧತೆಯನ್ನು ನೋಡುತ್ತಾನೆ. ಮಾಯೆಯು ಎಲ್ಲರನ್ನೂ ತಟ್ಟುತ್ತದೆ. ಹಾಗಾದರೆ ಅದು ಬ್ರಹ್ಮನನ್ನೂ ತಟ್ಟಬೇಕಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ. ಬ್ರಹ್ಮನನ್ನು ಮಾಯೆ ತಟ್ಟಿದರೆ, ಅದು ಹೇಗೆ ಬ್ರಹ್ಮವಾದೀತು ಎಂಬ ಸಂದೇಹವೂ ಏಳುತ್ತದೆ. ಇದಕ್ಕೆ ವೇದಾಂತ ಕೊಡುವ ಉತ್ತರ ಸಂಕೀರ್ಣ, ಕಠಿಣ. ಆದರೆ ಶ್ರೀರಾಮಕೃಷ್ಣರು ನೀಡುವ ನಿದರ್ಶನ ಸರಳ, ಸುಲಭ. ಅವರು ಹೀಗೆ ಹೇಳುತ್ತಾರೆ: ಹಾವಿನ ಹಲ್ಲು ಬೇರೆ ಎಲ್ಲರಿಗೂ ವಿಷಪ್ರಾಯವಾದುದು. ಆದರೆ ತನ್ನ ಹಲ್ಲಿನಲ್ಲಿರುವ ವಿಷದಿಂದ ಅದಕ್ಕೆ ಯಾವುದೇ ಅಪಾಯವಿಲ್ಲ. ಇನ್ನೊಂದು ಪ್ರಾಣಿಯನ್ನು

ಕಚ್ಚಿದಾಗ ಮಾತ್ರ ವಿಷ ಆ ಪ್ರಾಣಿಯನ್ನು ಕೊಲ್ಲುತ್ತದೆ. ಹಾಗೆಯೇ ಮಾಯೆಯೆಂಬುದು ಈಶ್ವರನಿಗೆ ಅಧೀನವಾದುದು. ಅದು ಬೇರೆಯವರನ್ನು ಬಾಧಿಸಬಹುದು. ಆದರೆ ತನ್ನನ್ನೇ ಬಾಧಿಸಲಾರದು. ಹೀಗಾಗಿ ಮಾಯೆಯಿಂದ ಈಶ್ವರನಿಗೆ ಏನೂ ತೊಂದರೆಯಿಲ್ಲ. ಅವನು ಮಾಯಾತೀತನು. ಆದರೆ ಮಾಯೆ ಇಡೀ ವಿಶ್ವವನ್ನು ಮೋಹಗೊಳಿಸುವುದು.

ವಿದ್ಯಾಮಾಯೆ – ಅವಿದ್ಯಾ ಮಾಯೆ: ಶ್ರೀರಾಮಕೃಷ್ಣರು ಮಾಯೆಯನ್ನು ೧. ವಿದ್ಯಾಮಾಯೆ ಮತ್ತು ೨. ಅವಿದ್ಯಾಮಾಯೆ ಎಂದು ವಿಂಗಡಿಸುತ್ತಾರೆ. ಯಾವುದು ನಮ್ಮನ್ನು ಭಗವಂತನನ್ನು ನೋಡುವುದಕ್ಕೆ ಸಹಾಯಮಾಡುತ್ತದೆಯೋ ಅದನ್ನು ಅವರು ವಿದ್ಯಾಮಾಯೆ ಎನ್ನುತ್ತಾರೆ. ಯಾವುದು ಭಗವಂತನಿಗೆ ವಿರುದ್ಧ ದಿಕ್ಕಿನಲ್ಲಿ ನಮ್ಮನ್ನು ಕರೆದುಕೊಂಡುಹೋಗುತ್ತದೆಯೋ, ಅದನ್ನು ಅವಿದ್ಯಾಮಾಯೆ ಎನ್ನುತ್ತಾರೆ. ಈ ಎರಡೂ ಪ್ರಕಾರಗಳನ್ನು ತಮ್ಮ ಮಾತುಕತೆಗಳಲ್ಲಿ ಶ್ರೀರಾಮಕೃಷ್ಣರು ಹಲವಾರು ರೀತಿಯಲ್ಲಿ ವಿವರಿಸುತ್ತಾರೆ.

ದಕ್ಷಿಣೇಶ್ವರದ ದೇವಸ್ಥಾನದಲ್ಲಿ ಒಬ್ಬ ಸಾಧುವು ನೆಲೆಸಿದ್ದನು. ಅವನು ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ದಿನವಿಡೀ ದೇವರ ಧ್ಯಾನದಲ್ಲಿ ಕಳೆಯುತ್ತಿದ್ದನು. ಒಂದು ದಿನ ಇದ್ದಕ್ಕಿದ್ದಂತೆ ಮೋಡ ಆವರಿಸಿಕೊಂಡಿತು. ಸ್ವಲ್ಪ ಹೊತ್ತಾದ ಮೇಲೆ ಗಾಳಿ ಬಂದು, ಆ ಮೋಡವನ್ನು ಚದುರಿಸಿತು. ಇದನ್ನು ಆ ಸಾಧು ನೋಡಿದನು. ಕೋಣೆಯ ಹೊರಗೆ ಬಂದು, ಆನಂದದಿಂದ ಕುಣಿದಾಡಲಾರಂಭಿಸಿದನು. ಶ್ರೀರಾಮಕೃಷ್ಣರು ಆತನ ಈ ಸಂತೋಷಕ್ಕೆ ಕಾರಣವನ್ನು ವಿಚಾರಿಸಿದರು. ಅದಕ್ಕೆ ಆ ಸಾಧುವು ಹೀಗೆ ಉತ್ತರಕೊಟ್ಟನು: "ಪ್ರಪಂಚವನ್ನು ಆವರಿಸಿರುವ ಆ ಮಾಯೆಯ ಸ್ವಭಾವ ಇದು! ಮೊದಲು, ಅದರ ಸುಳಿವೇ ಇರಲಿಲ್ಲ. ತಕ್ಷಣವೇ ಅದು ಬ್ರಹ್ಮನ ಆಕಾಶದಲ್ಲಿ ಪ್ರಪಂಚವನ್ನು ಸೃಷ್ಟಿಸುತ್ತ ಕಾಣಿಸಿಕೊಳ್ಳುವುದು. ಗಾಳಿ ಬಂದು ಮೋಡ ಚದುರಿಹೋದಂತೆ, ಬ್ರಹ್ಮನ ಒಂದು ಉಸಿರಿನಿಂದ ಎಲ್ಲವೂ ಚದುರಿಹೋಗುವುದು." ವೇದಾಂತದಲ್ಲಿ ಮಾಯೆಯ 'ಆವರಣ ಶಕ್ತಿ'ಯ ಬಗ್ಗೆ ಹೇಳುತ್ತಾರೆ. ಸತ್ಯವನ್ನು ಅದು ಮುಚ್ಚಿಬಿಡುವುದು. ಇದನ್ನು ಸುಲಭವಾಗಿ ವಿವರಿಸುವ ಸುಂದರ ನಿದರ್ಶನ ಇದು.

ಇನ್ನು ವಿದ್ಯಾಮಾಯೆಯ ವಿಚಾರ. ಜ್ಞಾನ, ಭಕ್ತಿ, ವೈರಾಗ್ಯ, ಭೂತದಯೆ – ಇವೆಲ್ಲವೂ ವಿದ್ಯಾಮಾಯೆಯ ಲಕ್ಷಣಗಳು. ಇವುಗಳ ಸಹಾಯದಿಂದ ಮಾತ್ರ ನಾವು ದೇವರನ್ನು ಪಡೆಯಬಹುದು. ಮಾಯೆ ಭಕ್ತರನ್ನು ತಪ್ಪುದಾರಿಗೆ ಎಳೆಯುವುದಿಲ್ಲ ಎನ್ನುತ್ತಾರೆ ಶ್ರೀರಾಮಕೃಷ್ಣರು. ಬೆಕ್ಕು ತನ್ನ ಹಲ್ಲಿನಿಂದ ಮರಿಯನ್ನು ಹಿಡಿದುಕೊಳ್ಳುತ್ತದೆ. ಇದರಿಂದ ಆ ಮರಿಗೆ ಏನೂ ಆಗುವುದಿಲ್ಲ. ಆದರೆ ಅದೇ ಹಲ್ಲಿನಿಂದ ಇಲಿಯನ್ನು ಹಿಡಿದರೆ, ಇಲಿ ಸಾಯುತ್ತದೆ. ಅದೇ ರೀತಿ, ಮಾಯೆ ಉಳಿದವರಿಗೆ ವಿನಾಶಕಾರಿಯಾಗಿ ಕಂಡುಬಂದರೂ ಭಕ್ತರನ್ನು ಅದು ದೇವರೆಡೆಗೆ ಕರೆದೊಯ್ಯುವ ಸಾಧನವಾಗಿ ಪರಿಣಮಿಸುತ್ತದೆ.

ಶ್ರೀರಾಮಕೃಷ್ಣರ ಪ್ರಕಾರ ಮಾಯೆಯನ್ನು ತಿರಸ್ಕಾರ ಮಾಡಬಾರದು. ಮಾಯೆಯ ಕೃಪೆಯಿಂದಲೇ ಬ್ರಹ್ಮಜ್ಞಾನ ಸಾಧ್ಯ. ಮಾಯೆಯು ಸರಿದು ಬಿಟ್ಟುಕೊಡದ ತನಕ ದೇವರ ದರ್ಶನವಾಗದು. ರಾಮ, ಸೀತೆ ಮತ್ತು ಲಕ್ಷ್ಮಣರು ಅರಣ್ಯ ವಾಸಕ್ಕೆ ಹೋದಾಗ, ರಾಮ ಮುಂದೆ ನಡೆಯುತ್ತಿದ್ದ, ಸೀತೆ ಅವನ ಹಿಂದೆ ನಡೆದುಕೊಂಡು ಹೋಗುತ್ತಿದ್ದಳು. ಲಕ್ಷ್ಮಣ ಆಕೆಯ ಹಿಂದೆ ನಡೆಯುತ್ತಿದ್ದ. ಲಕ್ಷ್ಮಣ ಮನುಷ್ಯನ ಸಂಕೇತ. ಸೀತೆ ಮಾಯೆಯ ಸಂಕೇತ. ರಾಮ ಬ್ರಹ್ಮನ ಸಂಕೇತ. ಲಕ್ಷ್ಮಣನಿಗೆ ರಾಮ ನೇರವಾಗಿ ಕಾಣುತ್ತಿರಲಿಲ್ಲ. ಸೀತೆ ಸ್ವಲ್ಪ ದಾರಿ ಬಿಟ್ಟುಕೊಟ್ಟರೆ ಮಾತ್ರವೇ ಕಾಣುತ್ತಿದ್ದನು. ಹಾಗೆಯೇ ಮನುಷ್ಯ ಮತ್ತು ಬ್ರಹ್ಮನ ನಡುವೆ, ತೆರೆಯಾಗಿ ಮಾಯೆಯಿದೆ. ಅದು ತನ್ನ ತೆರೆಯನ್ನು ಸರಿಸಿದರೆ ಮಾತ್ರವೇ ಪರಬ್ರಹ್ಮನ ಸಾಕ್ಷಾತ್ಕಾರವಾಗುತ್ತದೆ.

ವೇದಾಂತ–ತಂತ್ರಗಳ ಸಾಮರಸ್ಯ : ಇಲ್ಲಿ ಒಂದು ವೈಶಿಷ್ಟ್ಯವನ್ನು ಗಮನಿಸಬಹುದು. ಅದೆಂದರೆ ಶ್ರೀರಾಮಕೃಷ್ಣರು, ತಂತ್ರಶಾಸ್ತ್ರದಲ್ಲಿ ಬರುವ 'ಶಿವ–ಶಕ್ತಿ' ವಿಚಾರವನ್ನು ವೇದಾಂತದ 'ಬ್ರಹ್ಮ–ಮಾಯೆ' ಗೂ ಅನ್ವಯಿಸುತ್ತಾರೆ. ವೇದಾಂತದಲ್ಲಿ ತುಚ್ಛವೆಂದು ಪರಿಭಾವಿಸುವ 'ಮಾಯೆ'ಗೆ ದೇವಿಯ ಸ್ಥಾನವನ್ನು ಕೊಡುತ್ತಾರೆ; 'ಕಾಳಿ–ಕೃಷ್ಣ ಅಭೇದ' ಎಂದು ಹೇಳುತ್ತಾರೆ. ಹೀಗೆ ಸುಂದರ ತಾತ್ತ್ವಿಕ ಸಾಮರಸ್ಯವನ್ನು ನಾವಿಲ್ಲಿ ಕಾಣುತ್ತೇವೆ.

ಅನುಷ್ಠಾನಕ್ಕೆ ಅನ್ವಯ: ಯಾವುದನ್ನು 'ಶಕ್ತಿ' ಅಥವಾ 'ಮಾಯೆ' ಯೆಂದು ಕರೆದು ಆರಾಧಿಸಬೇಕೋ, ಅಂಥ ಜಗನ್ಮಾತೆಯ ಅಂಶಗಳು ಈ ಜಗತ್ತಿನೆಲ್ಲೆಡೆ ಇರುವ ಸ್ತ್ರೀಯರು. ಹೀಗಾಗಿ ಅವರೆಲ್ಲರನ್ನೂ ಸ್ವಂತ ತಾಯಿಯಂತೆಯೇ ತಿಳಿಯಬೇಕು ಎಂದು ಶ್ರೀರಾಮಕೃಷ್ಣರು ಬೋಧಿಸುತ್ತಾರೆ. ಈ ಭಾವವನ್ನು ಬೆಳೆಸಿಕೊಂಡರೆ, ಮನಸ್ಸಿನಲ್ಲಿ ಮೂಡಬಹುದಾದ ಕೆಟ್ಟ ಭಾವನೆಗಳನ್ನು ಗೆಲ್ಲಬಹುದು ಎಂದು ಅವರು ಕಿವಿಮಾತು ಹೇಳುತ್ತಾರೆ.

ಶ್ರೀಮಾತೆಯವರ ಮಾತುಗಳು: ಶ್ರೀಮಾತೆಯವರು ಶಕ್ತಿಸ್ವರೂಪಿಣಿ ಎನ್ನುವುದು ಭಕ್ತರ ವಿಶ್ವಾಸ. ಅವರು ಈ ಶಿವ–ಶಕ್ತಿಯರ ವಿಚಾರದಲ್ಲಿ ಹೇಳುವ ಕೆಲವು ಮಾತುಗಳನ್ನು ಈಗ ಮನನ ಮಾಡೋಣ. ಜೀವನದ ರಹಸ್ಯದ ಬಗ್ಗೆ ಶ್ರೀಮಾತೆ ಬಹಳ ಕಡೆ ಉಲ್ಲೇಖ ಮಾಡುತ್ತಾರೆ. ಈ ಜಗತ್ತೆಂಬುದು ಭಗವಂತನ ಲೀಲೆ ಎಂದು ಹೇಳುತ್ತಾರೆ. ನಾವು ಆತನ ಕೈಯಲ್ಲಿ ಆಟಿಕೆಗಳು. ಹೀಗಾಗಿ ಆತ ನಡೆಸಿದಂತೆ ನಾವು ನಡೆಯಬೇಕು, ಇರಿಸಿದಂತೆ ನಾವು ಇರಬೇಕು. ಜೀವನದ ಕಷ್ಟಗಳಿಗೆ ದೇವರನ್ನು ದೂರುವುದು ತರವಲ್ಲ. ಅದಕ್ಕೆ ನಾವೇ ಹೊಣೆಗಾರರು. ಜಗನ್ಮಾತೆಯೇ ಎಲ್ಲರ ತಾಯಿಯೂ ಆಗಿದ್ದಾಳೆ. ಅವಳಿಂದಲೇ ಒಳ್ಳೆಯದು ಮತ್ತು ಕೆಟ್ಟದ್ದು – ಎರಡೂ ಹೊರಹೊಮ್ಮಿವೆ. ಈ ಸೃಷ್ಟಿಯು ಅತಿ ಸಂಕೀರ್ಣವಾದುದು. ಸಾಧನೆಯ ಅವಧಿಯಲ್ಲಿ ಭಗವಂತನ ಅಸ್ತಿತ್ವವನ್ನು ನಾವು ಮನಗಾಣುವುದಿಲ್ಲ. ಆದರೆ ಸಾಕ್ಷಾತ್ಕಾರದ ನಂತರ, ಎಲ್ಲ ದೇವತೆಗಳೂ, ಪೂಜಾಮೂರ್ತಿಗಳೂ

ಮಾಯೆಯ ಹಂದರದಲ್ಲಿಯೇ ಇರುವುದನ್ನು ಮನಗಾಣುತ್ತೇವೆ. ಎಲ್ಲವೂ ಕಾಲಾಂತರದಲ್ಲಿ ಕಾಣಿಸಿಕೊಂಡು, ಕ್ರಮೇಣ ಮರೆಯಾಗುತ್ತವೆ. ಸಾಕ್ಷಾತ್ಕಾರದ ಸೂರ್ಯೋದಯವಾಗುತ್ತಲೇ, ದೇವತೆಗಳು ಮುಂತಾದವು ನಿಜವಾಗಿಯೂ ಅದೃಶ್ಯಗೊಳ್ಳುತ್ತವೆ. ಜಗನ್ಮಾತೆಯೇ ಇಡೀ ಬ್ರಹ್ಮಾಂಡವನ್ನು ಆವರಿಸಿಕೊಂಡಿರುವುದನ್ನು ಸಾಧಕನು ಆಗ ಕಂಡುಕೊಳ್ಳುತ್ತಾನೆ. ಆಗ ಎಲ್ಲವೂ ಒಂದೇ ಎನ್ನುವ ದರ್ಶನವುಂಟಾಗುತ್ತದೆ. ಇದು ಸರಳ ಸತ್ಯ.

"ಈ ಮಹಾಮಾಯೆಯು ಎಂಥ ಭ್ರಮೆಯನ್ನು ಉಂಟುಮಾಡಿದ್ದಾಳೆ! ಒಬ್ಬ ವ್ಯಕ್ತಿಗೆ ಯಾರೂ ಬಾಂಧವರು ಇಲ್ಲ ಎಂದಿಟ್ಟುಕೊಳ್ಳೋಣ. ಆದರೂ ಒಂದು ಬೆಕ್ಕನ್ನು ಇಟ್ಟುಕೊಳ್ಳುವಂತೆ ಪ್ರಚೋದಿಸಿ, ಆ ಮೂಲಕ ಮಹಾಮಾಯೆಯು ಅವನು ಪ್ರಾಪಂಚಿಕನಾಗುವಂತೆ ಮಾಡಿಬಿಡುತ್ತಾಳೆ. ಆಕೆಯು ಆಟವಾಡುವುದೇ ಹೀಗೆ! " ಎಂದು ಶ್ರೀಮಾತೆ ಉದ್ಗರಿಸುತ್ತಾರೆ.

ಸ್ವಾಮಿ ವಿವೇಕಾನಂದರ ವಿಚಾರಗಳು : ತಮ್ಮ ಕವಿತೆಗಳು ಮತ್ತಿತರ ಬರಹಗಳಲ್ಲಿ ಸ್ವಾಮಿ ವಿವೇಕಾನಂದರು ಜಗನ್ಮಾತೆಯ ಮೇಲಿನ ತಮ್ಮ ಭಕ್ತಿಭಾವವನ್ನು ಹೃದಯಂಗಮವಾಗಿ ತೋಡಿಕೊಂಡಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು:

"ಜೋಪಾನವಾಗಿ, ಪ್ರೀತಿಪಾತ್ರಳಾದ, ಲಾವಣ್ಯನಿಧಿಯಾದ ಜಗನ್ಮಯಿಯನ್ನು ನಿನ್ನ ಹೃದಯಾಂತರಾಳದಲ್ಲಿ ರಕ್ಷಿಸು."

"ನಿನ್ನ ನಾಲಗೆಯನ್ನು ಬಿಟ್ಟು ಉಳಿದೆಲ್ಲವನ್ನೂ ಆಚೆಗೆ ಬಿಸುಡು. ನಾಲಗೆ 'ತಾಯಿ, ತಾಯಿ' ಎನ್ನುತ್ತಿರಲಿ."

"ಮತ್ತಾವ ಹೀನ ಆಲೋಚನೆಗಳೂ ನನ್ನ ಮನಸ್ಸನ್ನು ಪ್ರವೇಶಮಾಡದಿರಲಿ. 'ನಾನು' ಮತ್ತು 'ನನ್ನ ಹೃದಯ' ಮಾತ್ರವೇ ತಾಯಿಯನ್ನು ನೋಡುತ್ತಿರಲಿ."

"ಓ ನನ್ನ ಬಾಳಿನ ಚಂದ್ರಮಳೇ, ನೀನು ವ್ಯಕ್ತಿಗೆ ಅತೀತವಾಗಿರುವೆ. ನನ್ನ ಆತ್ಮದ ಆತ್ಮವಾಗಿರುವೆ."

ಭಾರತದಲ್ಲಿ ಶಕ್ತಿಪೂಜೆಯು ಪ್ರಸಿದ್ಧಗೊಳ್ಳಬೇಕು ಎಂದು ಸ್ವಾಮಿ ವಿವೇಕಾನಂದರು ಆಶಿಸಿದ್ದರು. ಸದ್ಯಕ್ಕೆ ದೇವರನ್ನು ಅನಂತ ಶಕ್ತಿಸ್ವರೂಪಿಣಿಯಾದ ತಾಯಿಯೆಂದು ಆರಾಧಿಸಬೇಕು. ಇದರಿಂದ ಉಪಾಸಕರು ಪವಿತ್ರರಾಗುತ್ತಾರೆ. ಇದರಿಂದ ಅದ್ಭುತವಾದ ಸಾಮರ್ಥ್ಯ ಈ ದೇಶಕ್ಕೆ ಬರುತ್ತದೆ. ಸ್ವಾಮೀಜಿಯವರ ಪ್ರಕಾರ, ಶಕ್ತಿಯ ಅನುಗ್ರಹವಿಲ್ಲದೆ ನಾವು ಏನನ್ನೂ ಸಾಧಿಸಲಾರೆವು. ಯೂರೋಪು ಮತ್ತು ಅಮೆರಿಕಾ ದೇಶದ ಜನಗಳು ಮಾಡುತ್ತಿರುವುದೂ ಶಕ್ತಿಯ ಆರಾಧನೆಯೇ. ಆದರೆ ಅವರು ಅಜ್ಞಾನದಿಂದ, ಇಂದ್ರಿಯತೃಪ್ತಿಯ ಮೂಲಕ ಶಕ್ತಿಯನ್ನು ಆರಾಧಿಸುತ್ತಿದ್ದಾರೆ. ಇನ್ನು ಸಾತ್ವಿಕ ದೃಷ್ಟಿಯಿಂದ, ಪವಿತ್ರಭಾವನೆಗಳಿಂದ ಕೂಡಿ ಶಕ್ತಿಯನ್ನು, 'ಜಗಜ್ಜನನಿ' ಎಂದು ಆರಾಧಿಸಿದರೆ, ಅದೆಷ್ಟು ಕಲ್ಯಾಣಕಾರಿಯಾಗುತ್ತದೆ ಎಂಬುದನ್ನು ಯೋಚಿಸಿನೋಡಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. "ಆದಕಾರಣವೇ, ನನಗೆ ತಾಯಿಯ ಅನುಗ್ರಹ ತಂದೆಯ ಅನುಗ್ರಹಕ್ಕಿಂತ ಲಕ್ಷಪಾಲು ಪವಿತ್ರವಾದುದು. ತಾಯಿಯ ಆಶೀರ್ವಾದ ಮತ್ತು ಅನುಗ್ರಹಗಳು ನನಗೆ ಅಮೂಲ್ಯವಾದವು" ಎಂದು ಅವರು ಉದ್ಗರಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀಮಾತೆ ಶಾರದಾದೇವಿಯವರನ್ನು ವಿಶೇಷ ದೃಷ್ಟಿಯಿಂದ ಸ್ವಾಮೀಜಿ ನೋಡುತ್ತಾರೆ. ಭರತಖಂಡದಲ್ಲಿ ಶಕ್ತಿಪೂಜೆಯ ಮಹತ್ವವನ್ನು ಪ್ರಚಾರ ಮಾಡುವುದಕ್ಕಾಗಿಯೇ ಶ್ರೀಮಾತೆ ಜನ್ಮವೆತ್ತಿದ್ದಾರೆ. ಅವರ ವ್ಯಕ್ತಿತ್ವದ ಆಧಾರದ ಮೇಲೆ ಗಾರ್ಗಿ, ಮೈತ್ರೇಯಿ ಮೊದಲಾದವರು ಜನ್ಮತಾಳುವರು. ಆದಕಾರಣವೇ ಮೊದಲು ಶ್ರೀಮಾತೆಯವರಿಗೊಂದು ಮಠವನ್ನು ಕಟ್ಟಬೇಕು. ಇದೇ ಸ್ವಾಮೀಜಿಯವರ ಕನಸಾಗಿತ್ತು. ಸ್ವಾಮೀಜಿಯವರ ಈ ಉದ್ದೇಶವು ಮುಂದೆ ಸಫಲವಾಗಿದ್ದನ್ನು ನೋಡುತ್ತೇವೆ.

ನಿಜವಾದ ಶಕ್ತಿಪೂಜೆ ಯಾವುದು? ಇದು ಬರಿಯ ಆಚರಣೆಯ ಪೂಜೆಯಲ್ಲ. ಶಕ್ತಿಪೂಜೆ ಎಂದರೆ ಸ್ತ್ರೀಯರನ್ನು ಗೌರವಯುತವಾಗಿ ಕಾಣುವುದು. ಇದು ಕೇವಲ ಮಾನಸಿಕ ಭಾವನೆಯಲ್ಲ ಅಥವಾ ಕಲ್ಪನೆಯೂ ಅಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಎಲ್ಲ ಕಡೆಗೆ ಸ್ತ್ರೀಯರಿಗೇ ಅಗ್ರಸ್ಥಾನ. ಎಲ್ಲ ಕಡೆಯೂ ಪ್ರಥಮ ಸ್ಥಾನವನ್ನು ಕೊಡುವುದು ಸ್ತ್ರೀಯರಿಗೇ. ಇದೇ ನಿಜವಾದ ಶಕ್ತಿಪೂಜೆ ಎಂದು ಸ್ವಾಮೀಜಿ ಬಣ್ಣಿಸುತ್ತಾರೆ. ಆದ್ದರಿಂದಲೇ ಆ ದೇಶಗಳು ಪ್ರಗತಿಹೊಂದಿರುವುದು ಎಂದೂ ವಿವರಿಸುತ್ತಾರೆ. ಭಾರತದಲ್ಲಿ ಸ್ತ್ರೀಯರ ಬಗ್ಗೆ ಇದಕ್ಕಿಂತ ಉತ್ತಮವಾದ ಆದರ್ಶವಿದೆ. ಆದರೆ ಅದನ್ನು ಅನುಷ್ಠಾನಕ್ಕೆ ತರುವಲ್ಲಿ ನಾವು ಸೋತಿದ್ದೇವೆ. ನಿಜವಾದ ಶಕ್ತಿ ಉಪಾಸನೆಯಿಂದ ಮಾತ್ರವೇ ಭಾರತದ ಉದ್ಧಾರ ಸಾಧ್ಯ ಎಂದು ಸ್ವಾಮೀಜಿ ನಮಗೆ ಮನಗಾಣಿಸುತ್ತಾರೆ.

ಉಪಸಂಹಾರ : ಶಿವ–ಶಕ್ತಿ ತತ್ತ್ವವು ತಾತ್ತ್ವಿಕವಾಗಿ, ಆಧ್ಯಾತ್ಮಿಕವಾಗಿ ಮಾತ್ರವಷ್ಟೇ ಮುಖ್ಯವಾದುದುಲ್ಲ, ಅದು ಸಾಮಾಜಿಕ ಪರಿವರ್ತನೆಯನ್ನೂ ತರಬಲ್ಲದು. ಈ ಭವ್ಯ ಸಿದ್ಧಾಂತದ ಹಿನ್ನೆಲೆಯಲ್ಲಿ ಮಾತ್ರವೇ ಸ್ತ್ರೀಪುರುಷರ ಸಮಾನತೆಯನ್ನು ನೈಜರೂಪದಲ್ಲಿ ತರಬಹುದು. ಹಾಗೆಯೇ ಇದರಿಂದ ಮಾತ್ರವೇ ವೈಯಕ್ತಿಕ ನಿಶ್ರೇಯಸ್ಸು ಹಾಗೂ ಸಾಮಾಜಿಕ ಅಭ್ಯುದಯಗಳನ್ನು ಸಾಧಿಸಲು ಸಾಧ್ಯ. ಈ ವಿಚಾರವನ್ನೇ ನಾವು ದಿವ್ಯತ್ರಯರ ಉಪದೇಶಗಳಲ್ಲಿ ಕಾಣುತ್ತೇವೆ.

ಯುಗಾವತಾರ ಭಗವಾನ್ ಶ್ರೀರಾಮಕೃಷ್ಣರ ಪುಣ್ಯಾವತಾರದಿಂದ ನಾರೀಪ್ರತೀಕದಲ್ಲಿ ಶಕ್ತಿಪೂಜೆಯು ವರ್ತಮಾನ ಯುಗದಲ್ಲಿ ವಿಶೇಷವಾಗಿ ಜಾಗೃತವಾಗಿದೆ. ನಾರೀ ಪ್ರತೀಕವನ್ನು ಇಷ್ಟು ಶುದ್ಧಭಾವದಿಂದ ಉಪಾಸನೆ ಮಾಡಿದ ಮತ್ತೊಂದು ವ್ಯಕ್ತಿಯನ್ನು ಜಗತ್ತು ನೋಡಿದೆಯೇ ಎನ್ನುವುದು ಸಂದೇಹ. ಶ್ರೀರಾಮಕೃಷ್ಣರ ಜೀವನವನ್ನು ಬಿಟ್ಟರೆ ಮತ್ತೆ ಯಾವ ಯುಗದಲ್ಲಿ, ಯಾವ ಅವತಾರದಲ್ಲಿ ಇಂಥ ಉಜ್ವಲ ಉಚ್ಚ ಆದರ್ಶವನ್ನು ಜಗತ್ತು ಕಂಡಿದೆ? *– ಸ್ವಾಮಿ ಶಾರದಾನಂದ*